**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001**

ಸಂಖ್ಯೆ:ಸಿ8[1]ಶಾಶಿಅ ದೂರು 33/2015–16 ದಿನಾಂಕ: 18.01.2016

**ಜ್ಞಾಪನ**

***ವಿಷಯ:*** ವಿವೇಕವರ್ಧಿನಿ ಆಂಗ್ಲ ಪ್ರೌಢಶಾಲೆ ಪ್ರಕಾಶನಗರ, ಬೆಂಗಳೂರು ಈ ಶಾಲೆಗೆ ವಿಶೇಷಾಧಿಕಾರಿಗಳನ್ನು ನೇಮಿಸುವ ಬಗ್ಗೆ.

***ಉಲ್ಲೇಖ*** : 1. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಇವರ ಪತ್ರ ಸಂಖ್ಯೆ: ಅಮ 5[7933] ಸ್ಥಳಾಂತರ 02/2015–16 ದಿನಾಂಕ: 31.07.2015 & 01.09.2015

&&&&&

**ಪ್ರಸ್ತಾವನೆ:**

ವಿವೇಕವರ್ಧಿನಿ ಆಂಗ್ಲ ಪ್ರೌಢಶಾಲೆ ಪ್ರಕಾಶನಗರ, ಬೆಂಗಳೂರು ಈ ಶಾಲೆಯ ಆಡಳಿತ ಮಂಡಳಿಯಲ್ಲಿ ಭ್ರಷ್ಟಾಚಾರ ಹಾಗೂ ದುರಾಡಳಿತದಿಂದ ನಡೆಯುತ್ತಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ಸಂಸ್ಥೆಯ ಮಾನ್ಯತೆಯನ್ನು ಹಿಂಪಡೆಯಬಾರದು ಎಂಬ ಬಗ್ಗೆ ಹಾಗೂ ಈ ಸಂಸ್ಥೆಗೆ ನಿಯಮಾನುಸಾರ ಆಡಳಿತಾಧಿಕಾರಿಗಳನ್ನು ನೇಮಿಸುವ ಬಗ್ಗೆ ಉಪನಿರ್ದೇಶಕರ ಹಂತದಲ್ಲಿ ಈಗಾಗಲೇ ಉಲ್ಲೇಖಿತ ದಿನಾಂಕ:31.07.2015 ಮತ್ತು 01.09.2015ರ ಪತ್ರಗಳಲ್ಲಿ ಎರಡು ಬಾರಿ ನೋಟೀಸ್ ಜಾರಿ ಮಾಡಲಾಗಿದೆ. ಈ ಸಂಬಂಧ ಸದರಿ ನೋಟೀಸ್‌ಗಳಿಗೆ ಸಮರ್ಥನೀಯ ದಾಖಲೆಗಳೊಂದಿಗೆ ಸೂಕ್ತ ಲಿಖಿತ ವಿವರಣೆಯನ್ನು ಆಡಳಿತ ಮಂಡಳಿಯಿಂದ ಸಲ್ಲಿಕೆಯಾಗಿರುವುದಿಲ್ಲ ಈ ಹಿನ್ನೆಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಉತ್ತರ ವಲಯ–2 ಬೆಂಗಳೂರು ಇವರನ್ನು ವಿಶೇಷಾಧಿಕಾರಿಗಳನ್ನಾಗಿ ಶಿಕ್ಷಣ ಕಾಯ್ದೆ–67ರಂತೆ ನೇಮಕ ಮಾಡುವಂತೆ ಉಪನಿರ್ದೇಶಕರು, ಬೆಂಗಳೂರು ಉತ್ತರ ಜಿಲ್ಲೆರವರು ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ ಶಾಲಾ ಶೈಕ್ಷಣಿಕ ಹಿತದೃಷ್ಟಿಯಿಂದ ಶಿಕ್ಷಣ ಕಾಯ್ದೆ 1983ರ ನಿಯಮ–67ರಂತೆ ಆಡಳಿತ ಮಂಡಳಿಯಲ್ಲಿನ ವಿವಾದವನ್ನು ಬಗೆಹರಿಸಿಕೊಳ್ಳುವ ಷರತ್ತಿಗೊಳಪಟ್ಟು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಉತ್ತರ ವಲಯ–2 ಬೆಂಗಳೂರು ಇವರನ್ನು ವಿಶೇಷಾಧಿಕಾರಿಗಳನ್ನಾಗಿ ನೇಮಿಸುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿವೇಕವರ್ಧಿನಿ ಆಂಗ್ಲ ಪ್ರೌಢಶಾಲೆ ಪ್ರಕಾಶನಗರ, ಬೆಂಗಳೂರು ಈ ಶಾಲೆಗೆ ಶಿಕ್ಷಣ ಕಾಯ್ದೆ 1983ರ ನಿಯಮ–67ರಂತೆ ಒಂದು ವರ್ಷದ ಅವಧಿಯವರೆಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಉತ್ತರ ವಲಯ–2. ಬೆಂಗಳೂರು ಇವರನ್ನು ವಿಶೇಷಾಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಲಾಗಿದೆ.

**ಷರತ್ತುಗಳು–**

1. ಸದರಿ ಆದೇಶವು ಈ ಕಛೇರಿಯಿಂದ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ
2. ಈ ಅವಧಿಯಲ್ಲಿ ಸಂಬಂಧಿಸಿದ ವಿಶೇಷಾಧಿಕಾರಿಗಳು, ಮೇಲ್ಕಂಡ ಆಡಳಿತ ಮಂಡಳಿಗಳ ಭಿನ್ನಾಭಿಪ್ರಾಯ ಬಗೆಹರಿಸುವ ಬಗ್ಗೆ ಕ್ರಮ ವಹಿಸತಕ್ಕದ್ದು.
3. ಶಾಲೆಯ ಸಿಬ್ಬಂದಿಗಳ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ ಸಿಬ್ಬಂದಿಗಳಿಗೆ ಕರ್ತವ್ಯ ನಿರ್ವಹಿಸಿದ ಅವಧಿಗೆ ವೇತನ ನೀಡುವ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.
4. ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಮತ್ತು ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸಿದ ನಿಯಮಗಳನ್ನು ತಪ್ಪದೆ ಪಾಲಿಸುವುದು.

21/1/16

[ಕೆ.ಎಸ್.ಸತ್ಯಮೂರ್ತಿ]
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಪ್ರತಿಯನ್ನು:**

1. ವಿಶೇಷಾಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಉತ್ತರ ವಲಯ–2. ಬೆಂಗಳೂರು ರವರ ಮುಂದಿನ ಕ್ರಮಕ್ಕಾಗಿ.
2. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ ಇವರಿಗೆ ಕಳುಹಿಸುತ್ತಾ, ಮೇಲ್ಕಂಡ ಜ್ಞಾಪನದಂತೆ ಕ್ರಮ ವಹಿಸಲು ತಿಳಿಸಿ, ಕಾಲಾನುಕಾಲಕ್ಕೆ ವಿಶೇಷಾಧಿಕಾರಿಗಳ ಕರ್ತವ್ಯದ ಬಗ್ಗೆ ಪರಿಶೀಲಿಸಿ ಈ ಕಛೇರಿಗೆ ವರದಿ ನೀಡಲು ತಿಳಿಸಿದೆ.
3. ಕಾರ್ಯದರ್ಶಿಗಳು, ವಿವೇಕವರ್ಧಿನಿ ಎಜುಕೇಷನ್ ಸೊಸೈಟಿ, 3ನೇ ಕ್ರಾಸ್, 14ನೇ ಮೈನ್, ಶ್ರೀರಾಮ್‌ಪುರ ಪೋಸ್ಟ್, ಬೆಂಗಳೂರು–21 (4)ಕಛೇರಿ ಪ್ರತಿ.\\10.96.135.22\e\D\EST2\special officer.doc